ಪೋಷಕರುಗಳ ವರಮಾನ ರೂ.11,000/– ಮತ್ತು ಅದಕ್ಕಿಂತ ಕಡಿಮೆ ಇರುವ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಾಡಲು ಸರ್ಕಾರ ಆದೇಶ ಹೊರಡಿಸಿದೆಯೇ;

ಆ) ಈ ಕಾಲೇಜುಗಳಲ್ಲಿ ಪ್ರವೇಶ ಪಡೆದಾಗ ಪಾವತಿ ಮಾಡಿರುವ ಪೂರ್ಣ ಶುಲ್ಕವನ್ನು ಕಾಲೇಜಿನ ಆಡಳಿತ ಮಂಡಳಿಯವರು ಮರು ಪಾವತಿ ಮಾಡುವರೇ;

ಇ) ಈ ವಿಷಯಗಳ ಬಗ್ಗೆ ಪೂರ್ಣ ಮಾಹಿತಿ ನೀಡುವುದು;

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :**

ಅ) ಸರ್ಕಾರದ ಆದೇಶ ಸಂಖ್ಯೆ: ಸಕಇ 5 ಬಿಸಿಎ 95 ದಿನಾಂಕ: 1–9–1995 ರನ್ವಯ ಸರ್ಕಾರಿ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗ 2ಎ, 2ಬಿ, 3ಎ ಮತ್ತು 3ಬಿಗಳಿಗೆ ಸೇರಿದ ವಿದ್ಯಾರ್ಥಿಗಳ ಪೋಷಕರ ವರಮಾನ ರೂ.11,000/– ಕ್ಕಿಂತ ಕಡಿಮೆ ಇದ್ದಲ್ಲಿ ಬೋಧನಾ ಶುಲ್ಕ, ಪರೀಕ್ಷಾ ಶುಲ್ಕ, ಮತ್ತು ಪ್ರಯೋಗಾಲಯ ಶುಲ್ಕಗಳಿಂದ ವಿನಾಯಿತಿ ಪಡೆಯಲು ಅವಕಾಶವಿರುತ್ತದೆ.. ಅನುದಾನರಹಿತ ಖಾಸಗಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಈ ವಿನಾಯಿತಿ ಅನ್ವಯವಾಗುವುದಿಲ್ಲ.

ಆ) ವಿದ್ಯಾರ್ಥಿಗಳ ದಾಖಲಾತಿ ಸಮಯದಲ್ಲಿ ಸದರಿ ಶುಲ್ಕಗಳನ್ನು ವಸೂಲು ಮಾಡಲು ಅವಕಾಶ ಇರುವುದಿಲ್ಲ. ಆದುದರಿಂದ ನಂತರ ಮರು ಪಾವತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಮೇಲೆ ಒದಗಿಸಲಾಗಿದೆ.

**ಮಂಡ್ಯ ಕ್ಷೇತ್ರದ ಬಸರಾಳು ಗ್ರಾಮದಲ್ಲಿ ಪದವಿ ಕಾಲೇಜು ಪ್ರಾರಂಭಿಸುವುದು**

**352 (674) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) :** ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬಸರಾಳು ಗ್ರಾಮವು ಹಿಂದುಳಿದ ಹೋಬಳಿ ಕೇಂದ್ರವಾಗಿದ್ದು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅಲ್ಲಿ ಪದವಿ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅಲ್ಲಿನ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಬೇರೆ ಕಡೆಗೆ ಹೋಗಲು ಸುಮಾರು 30 ಕಿ.ಮೀ. ಹೋಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಬಸರಾಳು ಈ ಗ್ರಾಮದಲ್ಲಿ ಪದವಿ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಕ್ರಮಕೈಗೊಳ್ಳುವುದೇ;

ಉ) ಹಾಗಿದ್ದಲ್ಲಿ, ಎಂದಿನಿಂದ ಪದವಿ ಕಾಲೇಜನ್ನು ಪ್ರಾರಂಭಿಸ ಲಾಗುವುದು?

**ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :**

ಅ) ಬಂದಿದೆ.

ಆ) ಬಂದಿದೆ.

ಇ) ಬಂದಿದೆ.

ಈ) ಹಣಕಾಸಿನ ಅಗತ್ಯತೆ ಮತ್ತು ಲಭ್ಯತೆಯನ್ನಾಧರಿಸಿ ಮುಂದಿನ ಸಾಲುಗಳಲ್ಲಿ ಕಾಲೇಜು ಸ್ಥಾಪನೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉ) ಉದ್ಭವಿಸುವುದಿಲ್ಲ.

**ಆಳಂದ ತಾಲ್ಲೂಕಿನ ಪಂಚಾಯತ್ ನಿವೇಶನಗಳು**

**353 (341) ಶ್ರೀ ಸುಭಾಷ ಆರ್. ಗುತ್ತೇದಾರ್ (ಆಳಂದ) :** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ನಗರದಲ್ಲಿರುವ ತಾಲ್ಲೂಕು ಪಂಚಾಯತಿ ಕಚೇರಿಯ ನಿವೇಶನದ ಅಳತೆ ಎಷ್ಟು (ಪೂರ್ಣ ವಿವರಗಳನ್ನು ನೀಡುವುದು);

ಆ) ತಾಲ್ಲೂಕು ಪಂಚಾಯತಿಯ ವಸತಿ ಗೃಹಗಳ ನಿವೇಶನಗಳ ಅಳತೆ ಎಷ್ಟು (ನಿವೇಶನವಾರು ಪೂರ್ಣ ವಿವರಗಳನ್ನು ನೀಡುವುದು);

ಇ) ಈ ನಿವೇಶನಗಳು ಸರ್ಕಾರದ ಯಾವ ಇಲಾಖೆಯ ವ್ಯಾಪ್ತಿಗೆ ಬರುತ್ತವೆ?